ರಾಜ್ಯಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ. ಕೇಂದ್ರಸರ್ಕಾರಕ್ಕೆ ಸಿಕಂದರಾಬಾದ್‌ಗೆ ಈಗಾಗಲೇ ಅವರು ಪತ್ರ ಬರೆದಿದ್ದಾರೆ. ಆದ್ದರಿಂದ ನೀವು ಏನು ಒತ್ತಾಯ ಮಾಡಬೇಕಾದರೂ ಮತ್ತೊಮ್ಮೆ ಸಂಬಂಧಪಟ್ಟವರಿಗೆ ಎಚ್ಚರಿಕೆ ಕೊಟ್ಟು ಬೇಗ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ವಿನಂತಿ ಮಾಡಿಕೊಳ್ಳಬಹುದು. ಇವರು ಉತ್ತರ ಏನು ಹೇಳುತ್ತಾರೆ ಪಾಪ. ನೀವು (ಮಂತ್ರಿಗಳಿಗೆ) ದಯಮಾಡಿ ಕೇಂದ್ರಸರ್ಕಾರಕ್ಕೆ ಬರೆದು ಸಿಕಂದರಾಬಾದ್‌ನಲ್ಲಿರುವ ಡಿವಿಷನಲ್ ಆಫೀಸಿಗೆ ತಕ್ಷಣ ಆ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕಾದುದನ್ನು ತಾವೇ ಹೇಳಿದ್ದೀರಿ. ಸಂಬಂಧಪಟ್ಟವರಿಗೆ ಬರೆದು ಅದನ್ನು ತಿಳಿಸುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಜವಾಹರ್ ನವೋದಯ ಶಾಲೆಯಲ್ಲಿ ಡೆಪ್ಯುಟಿ ಕಮಿಷನರನ್ನು ಸೂಪರ್‌ವೈಸರಾಗಿ ತಾವು ನೇಮಿಸಿದ್ದೀರಿ. ಆದರೆ ನ್ಯೂನತೆಗಳನ್ನು ಮತ್ತು ಸಮಸ್ಯೆಗಳನ್ನು ಇತ್ಯರ್ಥಪಡಿಸುವುದಕ್ಕೆ ಯಾರಾದರೂ ನಮ್ಮ ರಾಜ್ಯ ಸರ್ಕಾರದಿಂದ ಅಧಿಕಾರಿಗಳು ಇರಲೇಬೇಕಲ್ಲಾ. ನೇರವಾಗಿ ಯಾರೂ ಕೂಡ ಅವರನ್ನು ಪ್ರಶ್ನೆ ಮಾಡುತ್ತಿಲ್ಲ. ಆದ್ದರಿಂದ ಜಿಲ್ಲಾಧಿಕಾರಿಗಳಿಗೆ ಏನಾದರೂ ಅಧಿಕಾರ ಕೊಟ್ಟು ತಾವು ಆ ಕಾರ್ಯನಿರ್ವಹಣೆ ಮಾಡುವುದಕ್ಕೆ ಸಾಧ್ಯವೇ?

ಶ್ರೀ ಹೆಚ್.ಸಿ.ಗೋವಿಂದೇಗೌಡ:- ಅಧ್ಯಕ್ಷರೆ, ನನಗೆ ತಿಳಿದಿರುವ ಹಾಗೆ ನವೋದಯ ಶಾಲೆಗಳು ನಮ್ಮ ರಾಜ್ಯದ ಯಾವಯಾವ ಜಿಲ್ಲೆಗಳಲ್ಲಿ ನಡೆಯುತ್ತವೆ ಅದರ ಮೇಲ್ವಿಚಾರಣೆ ನೋಡತಕ್ಕ ಜವಾಬ್ದಾರಿ ಜಿಲ್ಲಾಧಿಕಾರಿಗಳಿಗೆ ಸಂಬಂಧಪಟ್ಟಿರತಕ್ಕದ್ದು. ನಮ್ಮ ಇಲಾಖೆಗೆ ಸಂಬಂಧಪಡದಿದ್ದರೂ ವಿದ್ಯಾ ಇಲಾಖೆ ಅಂದಮೇಲೆ ನಾವೂ ಅದರ ಬಗ್ಗೆ ತಿಳಿದುಕೊಳ್ಳಬೇಕಾಗುತ್ತದೆ. ತಾವು ಏನು ಕ್ವೆಶ್ಚನ್ಸ್ ಕಳುಹಿಸಿದ್ದೀರಿ ಅದನ್ನು ಕಳುಹಿಸಿದ ಮೇಲೆ ನಾವು ಅವರಿಗೆ ಬರೆದು ಏನೇನಾಗಿದೆ ಅದು ಏತಕ್ಕೆ ಕಡಿಮೆ ಇದೆ ಎಂದು ಹೇಳಿ ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಅವರು ನಾಲ್ಕು ಖಾಲಿ ಇರುವುದನ್ನು ಕೊಟ್ಟಿದ್ದಾರೆ. ನಾವು ಈಗಾಗಲೇ ಬರೆಸಿದ್ದೇವೆ. ಖಾಲಿ ಇರುವುದನ್ನು ಆದಷ್ಟು ಜಾಗ್ರತೆ ಭರ್ತಿ ಮಾಡಿ ಎಂದು. ಸಿಕಂದರಾಬಾದ್‌ನಲ್ಲಿ ಇದರ ವ್ಯವಸ್ಥೆ ಇರತಕ್ಕದ್ದು. ಸಿಕಂದರಾಬಾದಿಗೆ ಬರೆದಿದ್ದೇವೆ. ಚಿಮ್ಮನಕಟ್ಟಿಯವರು ಏನು ಹೇಳಿದ್ದೀರೀ ಅದರ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಜಾಗ್ರತೆಯಾಗಿ ವ್ಯವಸ್ಥೆ ಮಾಡಿ ಎಂದು ಹೇಳುತ್ತೇವೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಒಂದು ವರ್ಷದಲ್ಲಿ ಒಂದು ಮೀಟಿಂಗೂ ಮಾಡುವುದಿಲ್ಲ ಅಧ್ಯಕ್ಷರೆ. ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ಕಾಳಜಿಯಿಂದ ಕಾರ್ಯನಿರ್ವಹಿಸುವಂತೆ ತಾವು ಹೇಳಬೇಕು.

ವಿಷಯ:- ಅರಕಲಗೂಡಿನ ತಾಲ್ಲೂಕಿನ ಆಸ್ಪತ್ರೆಗಳಲ್ಲಿರುವ ವೈದ್ಯಾಧಿಕಾರಿಗಳ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 53 (404)

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅರಕಲಗೂಡು ತಾಲ್ಲೂಕಿನ ಯಾವ್ಯಾವ ಆಸ್ಪತ್ರೆಗಳಲ್ಲಿ ಕೊರತೆಯಿರುವ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಅವುಗಳನ್ನು ಭರ್ತಿಮಾಡಲು ಸರ್ಕಾರವವರು ಯಾವ ಕ್ರಮ ಕೈಗೊಳ್ಳಲಾಗುವುದು?

ಡಾ|| ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಕೊರತೆಯಿರುವ ವೈದ್ಯರ ಸಂಖ್ಯೆ -7. ವಿವರ ಈ ಕೆಳಕಂಡಂತೆ ಇರುತ್ತದೆ.

1. ಸಾರ್ವಜನಿಕ ಆಸ್ಪತ್ರೆ, ಅರಕಲಗೂಡು -2
2. ಪ್ರಾ.ಆ.ಕೇಂದ್ರ, ಕೊಣನೂರು -2
3. ಪ್ರಾ.ಆ.ಘಟಕ, ಅಂದ್ರಂಗಿ -1
4. ಪ್ರಾ.ಆ.ಘಟಕ, ಬನ್ನೂರು -1
5. ಪ್ರಾ.ಆ.ಘಟಕ, ರುದ್ರಪಟ್ಟಣ -1

ಆ) ಸಾರ್ವಜನಿಕ ಆಸ್ಪತ್ರೆ, ಅರಕಲಗೂಡಿನಲ್ಲಿ ಖಾಲಿ ಇರುವ ಎರಡು ಹುದ್ದೆಗಳನ್ನು ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬರುವ ವೈದ್ಯರಿಂದ ಹಾಗೂ ಪದೋನ್ನತಿ ನೀಡುವ ವೈದ್ಯರಿಂದ ಭರ್ತಿಮಾಡಲಾಗುವುದು. ಉಳಿದ ಐದು ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕ ಮಾಡಿ ಭರ್ತಿ ಮಾಡಲು ಈಗಾಗಲೇ ಪ್ರಕ್ರಿಯೆ ನಡೆದಿದೆ.

ಶ್ರೀ ಎ.ಟಿ.ರಾಮಸ್ವಾಮಿ:- ಸನ್ಮಾನ್ಯ ಅಧ್ಯಕ್ಷರೆ, ಅರಕಲಗೂಡು ತಾಲ್ಲೂಕಿನಲ್ಲಿ 7 ಜನ ವೈದ್ಯರ ಕೊರತೆ ಇದೆ ಎಂಬ ವಿಷಯವನ್ನು ತಿಳಿಸಿದ್ದಾರೆ. ಈ ವೈದ್ಯರ ಕೊರತೆ ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ ಇದೆ. ನಗರಗಳಲ್ಲಿ ವೈದ್ಯರ ಕೊರತೆ ಇಲ್ಲ. ಹಳ್ಳಿಗಾಡಿನಲ್ಲಿರತಕ್ಕ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದೆ. ನಗರಗಳಲ್ಲಿ ವೈದ್ಯರ ಕೊರತೆ ಇದ್ದರೂ ಕೂಡ ಬೇರೆ ವ್ಯವಸ್ಥೆ ಇಬೆ ಅಲ್ಲಿ. ಹಳ್ಳಿಗಾಡಿನಲ್ಲಿ ಬೇರೆ ವ್ಯವಸ್ಥೆ ಇರುವುದಿಲ್ಲ. ಆದುದರಿಂದ ಏನು ವೈದ್ಯರ ಕೊರತೆ ಇದೆ, ಆ ಕೊರತೆಯನ್ನು ಎಷ್ಟು ದಿವಸದಲ್ಲಿ ನಿವಾರಣೆ ಮಾಡಲಿಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ತಾವು ಸ್ಪಷ್ಟವಾಗಿ ಹೇಳಬೇಕು. ಪ್ರಾಥಮಿಕ ಆರೋಗ್ಯಕ್ಕೆ ಆದ್ಯತೆ ಎಂದು ಹೇಳುತ್ತೀರಿ. ಆದರೆ ತಾವು ಹೇಳುವುದು ಬರೀ ಆಶ್ವಾಸನೆಯಾಗಿ ಉಳಿದುಕೊಳ್ಳಬಾರದು. ನಮ್ಮ ಅರಕಲಗೂಡು ತಾಲ್ಲೂಕು ಕೇಂದ್ರದ ಆಸ್ಪತ್ರೆ ಏನಿದೆ ಅಲ್ಲಿ ಒಬ್ಬರೇ ಒಬ್ಬರು ವೈದ್ಯರಿದ್ದಾರೆ ಸುಮಾರು ಒಂದು ವರ್ಷದಿಂದ. ಅವರು ರಜಾ ಹಾಕಿಬಿಟ್ಟು ಹೋದರೆ ಅಲ್ಲಿ ಹೇಳುವವರು

ಕೇಳುವವರು ಗತಿ ಇಲ್ಲ. ಬಾಗಿಲು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ನೀವು ಹೇಳುತ್ತೀರಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿಕೊಂಡು ಬಂದವರನ್ನು ಅಥವಾ ಪದೋನ್ನತಿ ಹೊಂದಿದವರನ್ನು ಅಲ್ಲಿಗೆ ಹಾಕುತ್ತೇವೆ ಎಂದು. ಅವರು ಅಲ್ಲಿ ಬರುವುದಿಲ್ಲ. ಬರದೇ ಇದ್ದರೆ ಏನು ಮಾಡುತ್ತೀರಿ? ಎಷ್ಟು ದಿವಸದಲ್ಲಿ ಹಾಕುತ್ತೀರಿ ಎಂಬುದನ್ನು ಸ್ಪಷ್ಟವಾಗಿ ನಮಗೆ ತಿಳಿಸಬೇಕಾಗುತ್ತದೆ.

ಡಾ.ಎಚ್.ಸಿ.ಮಹದೇವಪ್ಪ:- ಸಮ್ಮಾನ್ಯ ಸಭಾಧ್ಯಕ್ಷರೇ, ಹಾಸನ ಜಿಲ್ಲೆಗೆ ಸುಮಾರು 35 ಕಾಂಟ್ರ್ಯಾಕ್ಟ್ ಡಾಕ್ಟರುಗಳನ್ನು ಗ್ರಾಮೀಣ ಪ್ರದೇಶಗಳಿಗೆ ತುಂಬುವುದಕ್ಕೆ ನಾವು ಆರ್ಡರ್ ಮಾಡಿ ಅಪಾಯಿಂಟ್ ಮಾಡಿದ್ದೇವೆ. ಅದರಲ್ಲಿ 78 ಜನ ವರದಿ ಮಾಡಿಕೊಂಡಿದ್ದಾರೆ. ಇನ್ನು 7 ಜನ ಮಾಡಿಕೊಂಡಿಲ್ಲ. 29ನೇ ತಾರೀಖು 11 ಜನ ವೈದ್ಯರುಗಳನ್ನು ಜಿಲ್ಲಾಧಿಕಾರಿಗಳು ಇಂಟರ್‌ವ್ಯೂ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಇವತ್ತು ಅಥವಾ ನಾಳೆ ಇದನ್ನು ಅಪ್ರೂವ್ ಮಾಡಿ ಅವರಿಗೆ ಕಳುಹಿಸುತ್ತೇವೆ. ಜೊತೆಗೆ ಈಗಾಗಲೇ ಈ ತಿಂಗಳ 15ನೇ ತಾರೀಖು ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಇರತಕ್ಕ ಸುಮಾರು 400 ಹುದ್ದೆಗಳನ್ನು ತುಂಬುವುದಕ್ಕೆ ಲೋಕಸೇವಾ ಆಯೋಗ ಸಂದರ್ಶನವನ್ನು ಪ್ರಾರಂಭ ಮಾಡುತ್ತಿದೆ. ತಕ್ಷಣದಲ್ಲೇ ನಾನು ಕಾರ್ಯಕ್ರಮವನ್ನು ಜಾರಿ ಮಾಡುತ್ತೇನೆ.

ಅಧ್ಯಕ್ಷರು:- ಇದು ಅರಕಲಗೂಡಿಗೆ ಸಂಬಂಧಪಟ್ಟ ಪ್ರಶ್ನೆ. ಸುಮಾರು ಜನ ಕೈ ಎತ್ತಿದರು. ಎಲ್ಲಾ ಕಡೆ ಈ ಸಮಸ್ಯೆ ಇದೆ ಎಂಬುದು ಗೊತ್ತಿದೆ. ಆದರೆ ಪ್ರಶ್ನೆ ಅರಕಲಗೂಡಿಗೆ ಮಾತ್ರ ಸಂಬಂಧಪಟ್ಟಿದ್ದುದು.

ಶ್ರೀ ಎ.ಟಿ.ರಾಮಸ್ವಾಮಿ:- ಈಗಾಗಲೇ ತಿಳಿಸಿದ ಹಾಗೆ ಅರಕಲಗೂಡಿನಲ್ಲಿರುವ ಆಸ್ಪತ್ರೆ ತಾಲ್ಲೂಕು ಕೇಂದ್ರದ ಆಸ್ಪತ್ರೆ. ಸುಮಾರು ಒಂದು ವರ್ಷದಿಂದ ಒಬ್ಬರೇ ವೈದ್ಯಾಧಿಕಾರಿಗಳಿದ್ದಾರೆ. ಹೇಗೆ ನಿರ್ವಹಣೆ ಮಾಡಬೇಕು ನೀವೇ ಹೇಳಿ. ಅಲ್ಲಿಗೆ ಬೇಗ ಒಬ್ಬ ವೈದ್ಯರನ್ನು ತುಂಬಬೇಕು. ಎಷ್ಟು ದಿವಸದಲ್ಲಿ ತುಂಬುತ್ತೀರಿ ಎಂಬುದನ್ನು ಹೇಳಿ. ತಾಲ್ಲೂಕು ಕೇಂದ್ರದಲ್ಲಿ ಒಬ್ಬರು ವೈದ್ಯರಿದ್ದರೆ, ಸಾಕಾಗುತ್ತದೆಯೇ, ತಾವೇ ಹೇಳಿ?

ಡಾ.ಹೆಚ್.ಸಿ.ಮಹದೇವಪ್ಪ:- ಆಗಷ್ಟ್ ತಿಂಗಳ ಮೊದಲ ಅಥವಾ ಎರಡನೇ ವಾರದಲ್ಲಿ ತುಂಬುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಜೊತೆಗೆ ಈಗಾಗಲೇ ತಮ್ಮ ಜಿಲ್ಲೆಯಿಂದ 11 ಜನ ವೈದ್ಯಾಧಿಕಾರಿಗಳ ಸಂದರ್ಶನ ಮಾಡಿ ಜಿಲ್ಲಾಧಿಕಾರಿಗಳು ನನಗೆ ಪಟ್ಟಿಯನ್ನು ಕಳುಹಿಸಿದ್ದಾರೆ. ಅದನ್ನು ಇವತ್ತು ಅಥವಾ ನಾಳೆ ಅಪ್ರೂವ್ ಮಾಡಿ ವೈದ್ಯರನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ಮೈಸೂರು ನಗರದ ಕುವೆಂಪು ನಗರದ ತೊಣಚಿಕೊಪ್ಪಲ್‌ಗೆ ಸಾರ್ವಜನಿಕ ಆಸ್ಪತ್ರೆ ಮಂಜೂರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 54 (461)

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ಆರೋಗ್ಯ ಮತ್ತು